SDM LAW COLLEGE LIBRARY

0205/0624

**II Semester 3 Year LL.B. / VI Semester 5 Year B.A. LL.B. / B.B.A. LL.B.**
**Examination, December 2015**
**FAMILY LAW – II**
**Mohammaden Law and Indian Succession Act**

Duration : 3 Hours Max. Marks : 100

**Instructions**: 1. Answer question No. **9** and **any five** of the remaining questions.
2. Question No. **9** carries **20** marks and the remaining questions carry **16** marks.
3. Answers should be written either in **English** or **Kannada completely.**

**ಸೂಚನೆಗಳು**: 1. ಪ್ರಶ್ನೆ **9** ಕ್ಕೆ ಉತ್ತರಿಸಿರಿ ಹಾಗೂ ಉಳಿದ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.
2. ಪ್ರಶ್ನೆ **9** ಕ್ಕೆ **20** ಅಂಕಗಳು ಮತ್ತು ಉಳಿದ ಪ್ರತಿ ಪ್ರಶ್ನೆಗಳಿಗೆ **16** ಅಂಕಗಳು.
3. ಉತ್ತರವನ್ನು ಸಂಪೂರ್ಣವಾಗಿ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಬರೆಯಿರಿ.

Q. No. 1. Explain the origin and development of Muslim law. Marks : 16

ಮುಸ್ಲಿಂ ಕಾನೂನಿನ ಹುಟ್ಟುವಿಕೆ ಮತ್ತು ಬೆಳವಣಿಗೆಯನ್ನು ವಿವರಿಸಿ.

Q. No. 2. State the law relating to Apostasy from Islam. Marks : 16

ಮಹಮ್ಮದೀಯ ಧರ್ಮದ ಪರಿತ್ಯಾಗದ ಬಗೆಗೆ ಇರುವ ಕಾನೂನನ್ನು ಹೇಳಿರಿ.

Q. No. 3. Examine the grounds for divorce under Indian Divorce Act 1869. Marks : 16

ಭಾರತೀಯ ವಿಚ್ಛೇದನ ಕಾಯ್ದೆ, 1869 ರಡಿ ವಿಚ್ಛೇದನದ ಆಧಾರಗಳನ್ನು ಪರಿಶೀಲಿಸಿ.

Q. No. 4. Define waqf. How the private waqf be established ? And also state the salient features of the Waqf Validating Act, 1913. Marks : 16

ವಕ್ಫ್ ಪರಿಭಾಷಿಸಿರಿ. ಖಾಸಗಿ ವಕ್ಫ್‌ನ್ನು ಹೇಗೆ ಸ್ಥಾಪಿಸಬಹುದು ? ಮತ್ತು ವಕ್ಫ್ ಊರ್ಜಿತಗೊಳಿಸುವ ಕಾಯ್ದೆ, 1913 ರ ವಿಶಿಷ್ಟ ಲಕ್ಷಣಗಳನ್ನು ತಿಳಿಸಿರಿ.

P.T.O.

SDM LAW COLLEGE LIBRARY



Q. No. 5. Define Will. What are the kinds of Will ? How the unprivileged Will be executed ? Marks : 16

'ಉಯಿಲು' ಪರಿಭಾಷಿಸಿರಿ. ಉಯಿಲಿನ ವಿಧಗಳಾವುವು ? ವಿಶೇಷಾಧಿಕೃತವಲ್ಲದ ಉಯಿಲನ್ನು ಹೇಗೆ ಮಾಡಬೇಕು ?

Q. No. 6. Enumerate the 'sharers' and their respective normal shares according to the Sunni law. Marks : 16

ಸುನ್ನಿ ಭಾಗಸ್ಥರನ್ನು ನಮೂದಿಸಿ, ಅವರುಗಳ ಸಾಮಾನ್ಯ ಹಿಸ್ಸೆ (ಪಾಲು)ಗಳನ್ನು ತಿಳಿಸಿ.

Q. No. 7. What is domicile ? Mention the kinds of domicile and explain how a person can acquire domicile in India. Marks : 16

ಅಧಿವಾಸ ಎಂದರೇನು ? ಅಧಿವಾಸದ ವಿಧಗಳನ್ನು ನಮೂದಿಸಿ ಮತ್ತು ವ್ಯಕ್ತಿಯೋರ್ವನು ಭಾರತದಲ್ಲಿ ಅಧಿವಾಸವನ್ನು ಹೇಗೆ ಪಡೆದುಕೊಳ್ಳಬಹುದೆಂದು ವಿವರಿಸಿ.

Q. No. 8. Write short notes on **any two** of the following : Marks : 2×8=16

ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Specific legacy and demonstrative legacy.
   ನಿರ್ದಿಷ್ಟ ಉತ್ತರದಾನ ಮತ್ತು ನಿರೂಪ್ಯ ಉತ್ತರದಾನ

b) Hiba and Hiba-bil-Iwaz
   ಹಿಬಾ ಮತ್ತು ಹಿಬಾ-ಬಿಲ್-ಇವಾಜ್

c) Legitimacy and Legitimation.
   ಔರಸತೆ ಮತ್ತು ಔರಸತೀಕರಣ.

Q. No. 9. Solve **any two** of the following problems : Marks : 10×2=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಪರಿಹರಿಸಿ.

a) Saleem promised Anjum that he would pay Rs. 10 lakhs as dower on the eve of marriage. Despite of her repeated request he neglected to keep up his promise. Being aggrieved she started living separately. Advice Anjum.

   ವಿವಾಹದ ವೇಳೆಯಲ್ಲಿ ರೂ. ಹತ್ತು ಲಕ್ಷ ಕನ್ಯಾ ಶುಲ್ಕವನ್ನು ಪಾವತಿಸುವುದಾಗಿ ಸಲೀಮ್‌ನು ಅಂಜುಮ್‌ಳಿಗೆ ವಾಗ್ದಾನವಿತ್ತನು. ಆಕೆಯು ಪದೇ ಪದೇ ಅರಿಕೆ ಮಾಡಿಕೊಂಡರೂ ಸಹ ಅವನು ತನ್ನ ವಾಗ್ದಾನವನ್ನು ಉಳಿಸಿಕೊಳ್ಳಲು ನಿರ್ಲಕ್ಷಿಸಿದನು. ಬಾಧಿತಳಾದ ಅಂಜುಮ್‌ಳು ಪ್ರತ್ಯೇಕವಾಗಿ ಜೀವಿಸಲು ಆರಂಭಿಸಿದಳು. ಅಂಜುಮ್‌ಗೆ ಸಲಹೆ ನೀಡಿರಿ.

SDM LAW COLLEGE LIBRARY



b) Dharmendra married Divya. There after he married Ranjitha. Divya objected the marriage and filed a suit for bigamy. So both renounced Hinduism and adopted Islam. Is it valid ?

ಧರ್ಮೇಂದರನು ದಿವ್ಯಾಳೊಂದಿಗೆ ವಿವಾಹವಾದನು. ಆದ ನಂತರ ಪುನಃ ರಂಜಿತಳ ಜೊತೆ ವಿವಾಹವಾದನು. ದಿವ್ಯಾ ಇದನ್ನು ವಿರೋಧಿಸಿದಳು ಮತ್ತು ಒಂದು ದಾವೆಯನ್ನು ಹೂಡಿದಳು. ಆದುದರಿಂದ ಇಬ್ಬರು ಮತಾಂತರಗೊಂಡು ಮಹಮ್ಮದೀಯ ಧರ್ಮವನ್ನು ಸ್ವೀಕರಿಸುತ್ತಾರೆ. ಇದು ಊರ್ಜಿತವೇ ?

c) Saniya and Suhail are close friends. They do not have any legal impediments to marry each other. They decided to live together without undergoing formalities of marriage. After getting a child, their relationship was strained. Now Saniya is looking for a remedy. Advice.

ಸಾನಿಯಾ ಮತ್ತು ಸುಹೇಲ್ ಆಪ್ತ ಸ್ನೇಹಿತರು. ಅವರ ಮಧ್ಯೆ ವಿವಾಹ ಆಗಲು ಕಾನೂನು ಬದ್ಧ ಅಡಚಣೆಗಳೇನು ಇರಲಿಲ್ಲ. ವಿವಾಹ ಔಪಚಾರಿಕತೆಗಳನ್ನು ಪಾಲಿಸದೇ ಇಬ್ಬರು ಒಂದಾಗಿ ಬಾಳಲು ನಿರ್ಧರಿಸಿದರು. ಮಗುವನ್ನು ಪಡೆದ ಬಳಿಕ ಅವರ ಸಂಬಂಧ ಬಿರುಕುಗೊಂಡಿತು. ಈಗ ಸಾನಿಯಾ ಪರಿಹಾರವನ್ನು ಅರಸುತ್ತಿದ್ದಾಳೆ. ಸಲಹೆ ನೀಡಿ.

---